

## ಪರಿಸರಸ್ನೇಹಿ ಚಹಾ ಲೋಟ



ಇತ್ತೀಚೆಗೆ ಕೆಲಸದ ನಿಮಿತ್ತ ಮಕ್ಕಳೊಂದಿಗೆ ಜಾರ್ಖಂಡ್ ರಾಜ್ಯದ ರಾಂಚಿಗೆ ಭೇಟಿಯಿತ್ತಿದ್ದೆ. ಅಲ್ಲಿಂದ ಸುಮಾರು ನೂರು ಕಿ.ಮೀ. ದೂರದ ಹಜಾರಿಬಾಗ್‌ಗೆ ಹೋಗಬೇಕಾಗಿ ಬಂತು. ಚಹಾ ಕುಡಿಯಲೆಂದು ರಸ್ತೆ ಬದಿಯಲ್ಲಿದ್ದ ಅಂಗಡಿಯ ಬಳಿ ವಾಹನ ನಿಲ್ಲಿಸಿದೆವು. ಆ ಅಂಗಡಿಯಲ್ಲಿ ಕಂಡ ಕೆಲವು ವಿಶೇಷತೆಗಳು ನಮ್ಮನ್ನು ಆಕರ್ಷಿಸಿದವು.

ಅಲ್ಲಿ ಚಹಾ ಕಾಯಿಸಲು ಇದ್ದಿಲು ಒಲೆ ಉಪಯೋಗಿಸುತ್ತಿದ್ದರು. ಅದಕ್ಕಿಂತ ಮುಖ್ಯವಾಗಿ ಚಹಾ ಕುಡಿಯಲು ಮಣ್ಣಿನ ಲೋಟಗಳನ್ನು ಬಳಸುತ್ತಿದ್ದರು. ನಾವು ಚಹಾ ಕುಡಿದು ಆ ಲೋಟಗಳನ್ನು ಅಲ್ಲಿದ್ದ ಲೋಟಗಳ ರಾಶಿಯಲ್ಲಿ ಹಾಕಿದೆವು. ಮಣ್ಣಿನಲ್ಲಿ ಮಣ್ಣಾಗುವ ಆ ಲೋಟಗಳು ಪರಿಸರಕ್ಕೆ ಯಾವ ಅಪಾಯವನ್ನೂ ಮಾಡವು ಎಂಬ ವಿಚಾರ ಮನಸ್ಸಿಗೆ ಹಿತವುಂಟು ಮಾಡಿತು. ಪ್ಲಾಸ್ಟಿಕ್ ಬಳಕೆಯ ಅಪಾಯ ಅರಿತು ಅವರು ಅಳವಡಿಸಿಕೊಂಡ ಈ ವಿಧಾನ ಎಲ್ಲೆಡೆಯೂ ಜಾರಿಯಾದರೆ ಎಷ್ಟು ಚೆನ್ನ! ಅಷ್ಟೇ ಅಲ್ಲ, ಮಣ್ಣಿನಲ್ಲಿ ಕರಕುಶಲ ವಸ್ತುಗಳನ್ನು ತಯಾರಿಸುವ ಕಸುಬುದಾರರಿಗೂ ಬದುಕು ಕೊಟ್ಟಂತಾದೀತು.

—ಡಾ. ವಿನಯ ಶ್ರೀನಿವಾಸ್, ಶಿವಮೊಗ್ಗ



ಚಹಾದ ಮಡಿಕೆ ಸುಡುವ ಒಲೆ





## ವೈರ್ ಚೀಲ ಈಗ ಫ್ಯಾಷನ್

ನಾವು ಚಿಕ್ಕವರಿದ್ದಾಗ ಈ ರೀತಿಯ ಚೀಲಗಳನ್ನು ಉಪಯೋಗಿಸುತ್ತಿದ್ದುದನ್ನು ಕಂಡಿದ್ದೆವು. ಕಾಲಕಳೆದಂತೆ ಹಲವು ಬಗೆಯ ಬ್ಯಾಗ್‌ಗಳು ಮಾರುಕಟ್ಟೆಗೆ ಬಂದು, ಈ ಚೀಲಗಳು ಕ್ರಮೇಣ ಮರೆಯಾಗತೊಡಗಿದವು. ಇದೀಗ ಮತ್ತೆ ವೈರ್ ಚೀಲಗಳು ಕಾಣಿಸಿಕೊಳ್ಳುತ್ತಿವೆ. ಇಂತಹ ಬ್ಯಾಗ್‌ಗಳನ್ನು ಉಡುಗೊರೆಯಾಗಿ ನೀಡಲು, ಅರಿಶಿಣ ಕುಂಕುಮ ಹಚ್ಚಿ ಕೊಡಲು, ತರಕಾರಿ ತರಲು ಬಳಸಲಾಗುತ್ತಿದೆ. ಮಂಗಳೂರಿನ ಗೆಳತಿ ಅನಿತಾ ಪೈ ಅನ್ನುವವರು ಈ ರೀತಿಯ ನೂರಾರು ವಿನ್ಯಾಸದ ವೈರ್ ಬ್ಯಾಗ್‌ಗಳನ್ನು ಬೇಡಿಕೆಗೆ ತಕ್ಕಂತೆ ತಯಾರಿಸುತ್ತಾರೆ. ಬಾಳಿಕೆ ಬರುವ, ಸುಂದರ ವಿನ್ಯಾಸದ, ಸುಲಭವಾಗಿ ಮನೆಯಲ್ಲಿ ತಯಾರಿಸುವ ವಿವಿಧ ವಿನ್ಯಾಸದ ವೈರ್ ಬ್ಯಾಗ್‌ಗಳನ್ನು ನೋಡಲು ತುಂಬಾ ಖುಷಿಯಾಗುತ್ತದೆ.

—ಲಕ್ಷ್ಮಿ ಝಾನ್ಸಿ ಭಟ್, ಬೆಂಗಳೂರು